# ನಮ್ಮ ನೆಲೆ ಸಂಸ್ಕೃತಿ



## ನಮ್ಮ ಸಂಕಲ್ಪ-ಸಾಂಸ್ಕೃತಿಕ ಶೋಧ


ಪ್ರಧಾನ ಸಂಪಾದಕರು

ಬಸಪ್ಪ ಶಿರಿಗೇರಿ

ಸಂಪಾದಕರು

ಡಾ. ಪಂಡರಿನಾಥ ಅಗ್ನಿಹೋತ್ರಿ

ನಾಗರಾಜ್ ಎಚ್.

ಯಣ್ಣಿಗೊಂಡ್ರು ಬಸವರಾಜ

ಬಸವರಾಜ ಬಿ. ಡಂಕನಕಲ್

ಗುರುಮೂರ್ತಿ ಕಮ್ಮಾರ





ಪ್ರಕಾಶನ : ಸಂಕಲ್ಪ ಎಜ್ಯುಕೇಷನ್ ಟ್ರಸ್ಟ್ (ರಿ). ಗಂಗಾವತಿ

# ನಮ್ಮ ನೆಲೆ-ಸಂಸ್ಕೃತಿ

ಪ್ರಧಾನ ಸಂಪಾದಕರು
**ಬಸಪ್ಪ ಶಿರಿಗೇರಿ**

ಸಂಪಾದಕರು
**ಡಾ. ಪಂಡರಿನಾಥ ಅಗ್ನಿಹೋತ್ರಿ**
**ನಾಗರಾಜ ಎಚ್.**
**ಯಣ್ಣಿಗೊಂಡ್ರು ಬಸವರಾಜ**
**ಬಸವರಾಜ ಬಿ. ಡಂಕನಕಲ್**
**ಗುರುಮೂರ್ತಿ ಕಮ್ಮಾರ್**

೨೦೨೧

ಪ್ರಕಾಶನ
**ಸಂಕಲ್ಪ ಎಜ್ಯುಕೇಶನ್ ಟ್ರಸ್ಟ್, (ರಿ.)**
ಗಂಗಾವತಿ

**NAMMA NELE SAMSKRUTI :**

| | | |
|---|---|---|
| Editor | : | Basappa Shirigeri |
| © | : | Editor's |
| First Edition | : | 2021 |
| Copies | : | 1000 |
| Publisher | : | Sankalpa Education Trust (R),<br>Near Bus stand, Swami Vivekananda Colony<br>Gangavathi - 583 227 |
| Pages | : | xxiv + 424 = 448 |
| Price | : | **Rs. 410/-** |
| Book Size | : | Demy 1/8 |
| Paper Used | : | 70 GSM N.S. Maplitho |

**ISBN : 978-93-5445-862-0**

ನಮ್ಮ ನೆಲೆ – ಸಂಸ್ಕೃತಿ

| | | |
|---|---|---|
| ಪ್ರಧಾನ ಸಂಪಾದಕರು | : | ಬಸಪ್ಪ ಶಿರಿಗೇರಿ |
| © ಹಕ್ಕುಗಳು | : | ಸಂಪಾದಕರು |
| ಪ್ರಥಮ ಮುದ್ರಣ | : | ೨೦೨೧ |
| ಪ್ರತಿಗಳು | : | ೧೦೦೦ |
| ಪ್ರಕಾಶಕರು | : | ಸಂಕಲ್ಪ ಎಜ್ಯುಕೇಶನ್ ಟ್ರಸ್ಟ್, (ರಿ.)<br>ಬಸ್‌ಸ್ಟ್ಯಾಂಡ್ ಪಕ್ಕದಲ್ಲಿ<br>ಸ್ವಾಮಿ ವಿವೇಕಾನಂದ ಕಾಲೋನಿ, ಗಂಗಾವತಿ |
| ಪುಟಗಳು | : | xxiv + ೪೨೪ = ೪೪೮ |
| ಬೆಲೆ | : | ರೂ. ೪೧೦/– |
| ಪುಸ್ತಕದ ಆಕಾರ | : | ಡೆಮಿ ೧/೮ |
| ಬಳಸಿದ ಕಾಗದ | : | ೭೦ ಜಿಎಸ್ಎಮ್ ಎನ್.ಎಸ್. ಮ್ಯಾಪಲಿಥೋ |

**ಪುಸ್ತಕದಲ್ಲಿ ಪ್ರಕಟಗೊಂಡ ಲೇಖನಗಳಲ್ಲಿ ವ್ಯಕ್ತವಾದ ವಿಷಯಾಂಶಗಳಿಗೆ ಲೇಖಕರೆ ಜವಾಬ್ದಾರರು.**

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ–582101
Email : chaitanyaoffset@gmail.com
Mobile : 8884495331, 9448223602

ಸಲಹಾ ಸಂಪಾದಕ ಮಂಡಳಿ

ನಾಗರಾಜ ಎಸ್. ಗುತ್ತೇದಾರ
ಡಾ. ಎಂ. ಆರ್ ಮಂಜುಸ್ವಾಮಿ
ಡಾ. ಅಮಿತ್‌ಕುಮಾರ್ ರೆಡ್ಡಿ
ಪ್ರೋ. ವಿಜಯಕುಮಾರ್ ವೈದ್ಯ
ಡಾ. ಜಾಜಿ ದೇವೇಂದ್ರಪ್ಪ
ಡಾ. ಶರಣಬಸಪ್ಪ ಕೋಲ್ಕಾರ್
ಡಾ. ಲಲಿತಾ ಬಾವಿಕಟ್ಟಿ
ಬಜರಂಗಬಲಿ ಗೌಡಪ್ಪನವರ್

೧೧. ಗಂಗಾವತಿ ತಾಲ್ಲೂಕಿನ ವೀರಗಲ್ಲುಗಳು ೫೬
- ಬಜರಂಗಬಲಿ ಗೌಡಪ್ಪನವರ್

೧೨. ಜನರ ಸರದಾರ ಕುಮಾರರಾಮ ೬೫
- ಡಾ. ಜಾಜಿ ದೇವೇಂದ್ರಪ್ಪ

೧೩. ಮಲೆನಾಡಿನ ಕುಮಾರರಾಮನ ಆಚರಣೆ : ೬೯
ಒಂದು ಸಾಂಸ್ಕೃತಿಕ ನೋಟ
- ಡಾ. ಮೋಹನ್ ಚಂದ್ರಗುತ್ತಿ.

೧೪. ಸ್ಥಳೀಯ ಐತಿಹ್ಯಗಳು ೭೫
- ಡಾ. ವಿಜಯಾನಂದ ವಗ್ಗೆ

೧೫. ಕೊಪ್ಪಳ ತಾಲ್ಲೂಕಿನ ಪ್ರವಾಸಿ ತಾಣಗಳು : ಒಂದು ಅಧ್ಯಯನ ೮೨
- ಶುಭಾ

೧೬. ಹುಲಿಗಿ - ಹುಲಿಗೆಮ್ಮ : ಸಾಂಸ್ಕೃತಿಕ ಕೇಂದ್ರದ ಅವಲೋಕನ ೯೩
- ಗಾಯತ್ರಿ ಭಾವಿಕಟ್ಟಿ

೧೭. SCHUDELD TRIBES WOMEN PARTICIPATION IN PANCHAYAT RAJ SYSTEM: A STUDY OF BALLARI DISTRICT ೯೯
- DR. RAMANNA A

೧೮. ಗಂಗಾವತಿ ತಾಲ್ಲೂಕಿನ ಸ್ತ್ರೀ ಶಿಲ್ಪಗಳು ೧೦೮
- ಬಜರಂಗಬಲಿ ಗೌಡಪ್ಪನವರ್

೧೯ ಮುಧೋಳ ಪರಿಸರದಲ್ಲಿ ಆಳಿದ ಪ್ರಾಚೀನ ಅರಸು ಮನೆತನಗಳು ೧೧೮
- ಡಾ. ಸೂರ್ಯಕಾಂತ ಕೊಕಟನೂರ

೨೦. ಜನಪದ ಸಾಹಿತ್ಯದಲ್ಲಿ ಸ್ತ್ರೀ ೧೨೪
- ಡಾ. ಹುಲಿಗೆಮ್ಮ ಬಿ.

೨೧. ಕೊಪ್ಪಳ ಜಿಲ್ಲೆಯ ಸ್ಥಳೀಯ ಅವಲೋಕನ ೧೨೮
- ಸುಮಿತ್ರಾ ಎಸ್. ವಿ.

೨೨. ಕನಕಗಿರಿಯ ಕನಕರಾಯನ ಉತ್ಸವ ೧೩೫
- ವೆಂಕಟೇಶ ಬಿ.

೨೩. ಸ್ಥಳೀಯ ತತ್ವಪದಕಾರ : ಕೊಳೂರ ಹುಸೇನಸಾಬ ೧೪೦
- ಮೀನಾಕ್ಷಿ ಬಿರಾದಾರ



೨೪. ಸಿದ್ಧಾಪುರ ದರ್ಶನ 'ಸ್ಥಳಿಯ ದೇವಾಲಯಗಳ ಒಂದು ನೋಟ ೧೪೬
- ಡಾ. ದೇವನಾಂಪ್ರಿಯ

೨೫. ಸ್ಥಳೀಯ ಐತಿಹ್ಯಗಳು ಕುಮಾರರಾಮನ ಕಥೆ ೧೫೨
- ರಾಮಣ್ಣ ಉಪ್ಪಾರ್

೨೬. ಚೆನ್ನಗಿರಿ ತಾಲ್ಲೂಕಿನ ಶಾಸನ ಉಲ್ಲೇಖಿತ ವೃತ್ತಿಗಳು ೧೫೭
- ಡಾ. ಯೋಗಾನಂದ ಎಸ್.ಕೆ.

೨೭ ಸ್ಥಳೀಯ ಐತಿಹಾಸಿಕ ಕೆರೆಗಳು ೧೬೪
- ಲಲಿತಾ

೨೮. ಶ್ರಮ ಸಿದ್ಧಾಂತ ಸಂಸ್ಕೃತಿಯ ಪರಿಕಲ್ಪನೆ ೧೬೭
- ಡಾ. ಕೆ. ಜಿ. ಚವ್ಹಾಣ್

೨೯. ಕನಕಗಿರಿ ಪರಿಸರದ ಸ್ಥಳನಾಮಗಳು ೧೭೨
- ಶ್ರೀಮತಿ ಆಶಿಕಾ ಎಚ್. ಸಿ.

೩೦. ಕೃಷಿ ಸಂಬಂಧಿ ಆಚರಣೆಗಳು ೧೭೬
- ರಾಜೇಶ್ವರಿ ಎಂ. ಶೆಟ್ಟರ್

೩೧. ಕೃಷಿ ಸಂಬಂಧಿತ ಹಬ್ಬಗಳು ೧೮೧
- ಡಾ. ಮಂಜುಸ್ವಾಮಿ ಮುತ್ತಿನಪೆಂಡಿಮಠ

೩೨. ನವಲಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರು ೧೮೭
- ಬಸಪ್ಪ ಶಿರಿಗೇರಿ

೩೩. ರಾಮದುರ್ಗ ಗ್ರಾಮದ ಹಿನ್ನಲೆ ೧೯೧
- ಡಾ. ಪಂಡರಿನಾಥ ಅಗ್ನಿಹೋತ್ರಿ

೩೪. ಕಾಮದಹನ : ಜನಪದ ನಂಬಿಕೆ ೧೯೬
- ನಾಗರಾಜ ಎಚ್.

೩೫. ತೆಕ್ಕಲಕೋಟೆ ವರವಿನ ಮಲ್ಲೇಶ್ವರ : ದೇವಾಲಯ ಮತ್ತು ಸಂಸ್ಕೃತಿ ೨೦೨
- ಯೆಣ್ಣಿಗೊಂಡ್ರು ಬಸವರಾಜ

೩೬. ಗಂಗಾವತಿ ತಾಲ್ಲೂಕಿನ ಜೈನ ಶಾಸನಗಳು ೨೧೧
- ಬಸವರಾಜ ಬಿ.

೩೭. ನವಲಿ ಪರಿಸರ : ಸಂಸ್ಕೃತಿ ಮತ್ತು ಐತಿಹ್ಯ ೨೧೭
- ಗುರುಮೂರ್ತಿ ಕಮ್ಮಾರ್

# ಕೃಷಿ ಸಂಬಂಧಿ ಆಚರಣೆಗಳು

**•ರಾಜೇಶ್ವರಿ ಎಂ. ಶೆಟ್ಟರ್**

ಕೃಷಿ ಮಾನವ ಜೀವನದಧಾತು, ಅದು ಜೀವನಾಡಿ, ಈ ಕೃಷಿಗೆ ಸಂಬಂಧಿಸಿದ ಬದುಕಿನಲಯಗಳು ಹಲವು ಇವೆ. ಈ ಲಯಗಳುಜೀವನಕ್ರಮವನ್ನು ನಿರ್ಧರಿಸುತ್ತವೆ. ಈ ನಿರ್ಧಾರಗಳು ಹಲವು ಸಂಗತಿಗಳನ್ನು ಆಧರಿಸಿರುತ್ತವೆ. ಈ ಸಂಗತಿಗಳು ಆಚರಣೆಗಳು.ಆಚರಣೆಗಳು ಕೃಷಿ ಆಧಾರಿತ ಜೀವಿಗಳ ಮನೋಸ್ಥೈರ್ಯವನ್ನು ಹೆಚ್ಚಿಸುತ್ತವೆ. ಕೃಷಿಗೆ ಭೂಮಿ, ಆಕಾಶ, ಮರ, ಗಿಡ, ಬಳ್ಳಿ, ಖಗ-ಮೃಗಎಲ್ಲವೂ ಅವಲಂಬಿತವಾಗಿವೆ. ರೈತರು ತಮ್ಮ ಕೃಷಿಯನ್ನು ಒಂದು ಮುಖ್ಯ ಆಚರಣೆಯನ್ನಾಗಿ ಮಾಡಿಕೊಂಡು ಬದುಕುತ್ತಾರೆ.ನೆಲದ ಮೇಲೆ ಜಲ ಸಂಸ್ಕೃತಿಇದೆ.ಕೃಷಿಗೆ ಜಲ ಮೂಲ ಧಾತು. ಮಳೆಯನ್ನು ಆಹ್ವಾನ ಮಾಡಿಕೊಳ್ಳವುದು, ಭೂಮಿಯ ಮೇಲೆ ಹಲವು ಆಚರಣೆಗಳಿವೆ. ಈ ಆಚರಣೆಗಳು ಎಲ್ಲವೂ ರೈತನಿಗೆ ಸಾಚೆತ್ವಾನ ನೀಡುತ್ತವೆ. ಕೊಪ್ಪಳ ಪರಿಸರದಾದ್ಯಂತ ಜೋಕುಮಾರನ ಆರಾಧನೆ, ಕಪ್ಪೆ ಮದುವೆ, ಕತ್ತೆ ಮೆರವಣಿಗೆ, ಮುಂತಾದ ಆಚರಣೆಗಳು ಕೃಷಿ ಉತ್ಪನ್ನಕ್ಕೆ ವಾಹಕಗಳಾಗಿ ಕೆಲಸ ನಿರ್ವಹಿಸುತ್ತವೆ. ಹಾಗಾಗಿ ಇವು ಬದುಕಿನ ಅವಿಭಾಜ್ಯ ಅಂಗಗಳು. ಇಂತಹ ಆಚರಣೆಯನ್ನು ಬಿಟ್ಟು ರೈತರು ಜೀವಿಸಲಾರರು. ಅಲ್ಲದೇ ಇಂತಹ ಕೃಷಿ ಸಂಬಂಧಿತ ಆಚರಣೆಗಳಿಂದಲೇ ಕೃಷಿ ಜೀವಂತವಾಗಿದೆ. ಅಂತಹ ಹಲವು ಆಚರಣೆಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

**ಜಲ ಸಂಬಂಧಿ ಆಚರಣೆಗಳು :**

ಮಾನವತನ್ನ ನಂಬಿಕೆಯಿಂದದೇವರ ಮೇಲೆ ಭಾರ ಹಾಕಿಜೀವನ ನಡೆಸುತ್ತಾ ಬಂದಿದ್ದಾನೆ. ರೈತರುತಮ್ಮ ಸುಖ-ದುಃಖ, ಕಷ್ಟ-ನಷ್ಟ, ಏಳು-ಬೀಳುಗಳಿಗೆಲ್ಲಾ ದೇವರನ್ನು ಪೂಜಿಸುವುದರಜೊತೆಗೆ ಶಪಿಸುತ್ತಾ ಬದುಕುತ್ತಿರುವನಿಸ್ವಾರ್ಥ ಜೀವಿಗಳು, ಅಂತೆಯೇ ಇವರು ಸರ್ವರಿಗೂ ಒಳ್ಳೆಯದಾಗಲಿ ಎಂಬ ಸಾಮೂಜಿಕ ಆಚರಣೆಗಳನ್ನು ಕಟ್ಟಿಕೊಂಡು, ಬೆಳೆಸಿಕೊಂಡು ಬಂದಿದ್ದಾರೆ. ಇವರ ಆಚರಣೆಗಳು ಇಂದು ಮೌಢ್ಯತೆಯುಳ್ಳವು ಎಂದು ಗೋಚರಿಸಿದಾಗಲೂ ಕೂಡಾ ಜನ ಸಮುದಾಯವನ್ನು ನಾಚೆಸುತ್ತವೆ. ಹೀಗೆ ರೈತನುದೇವರ ಮನವೊಲಿಸುವುದಕ್ಕಾಗಿ ಮಳೆ ಕುರಿತಾಗಿ ನಡೆಸುವ ಹಲವು ಆಚರಣೆಗಳನ್ನು ಈ ಕೆಳಗಿನಂತೆ ವಿವೇಚಿಸಬಹುದು.



**ಊರದೇವರಿಗೆ ನಡೆದುಕೊಳ್ಳುವುದು :**

ಊರಿಗೆ ಮಳೆ ಬರದಿದ್ದಾಗಊರಿನ ಸರ್ವರೆಲ್ಲರೂಕೂಡಿತಮ್ಮಊರದೇವರು (ಗ್ರಾಮದೇವತೆಗೆ) ದೀಡ್ ನಮಸ್ಕಾರಹಾಕುತ್ತಾರೆ.ಈ ರೀತಿಯಾದಆಚರಣೆಯಿಂದ ಎಷ್ಟೋ ಸಾರಿಮಳೆ ಬಂದಿದೆಯೆಂಬುದುಇಲ್ಲಿಯಜನರ ನಂಬಿಕೆ.ಇದು ಹಿಂದಿನಿಂದಲೂ ಈ ಆಧುನಿಕ ದಿನಮಾನಗಳಲ್ಲಿಯೂ ಕೂಡಾ ಈ ಆಚರಣೆರೂಢಿಯಲ್ಲಿದೆ.

ದೀಡ್ ನಮಸ್ಕಾರ ಹಾಕುವಾಗಪ್ರತಿಯೊಬ್ಬರುತಮ್ಮ ಮನೆಯಒಬ್ಬ ಹೆಣ್ಣು ಇಲ್ಲವೇ ಒಬ್ಬಗಂಡಸು ಉಟ್ಟ [ತೊಟ್ಟ] ಬಟ್ಟೆಯಲ್ಲಿಯೇ ದೀಡ್ ನಮಸ್ಕಾರ ಹಾಕಲು ತಯಾರಾಗುತ್ತಾರೆ. ನಂತರ ಅವರ ಕೈಗೆ ಒಂದು ಮೊಳ ಅಳತೆಯ ನೀಟಾದಒಂದು ಜೋಳದ ದಂಟು [ಬಡಿಗೆ]ಗೆಒಂದು ವೀಳ್ಯದೆಲೆಯನ್ನು ಕಟ್ಟಿಕೊಡುತ್ತಾರೆ. ಆಗ ಆ ಕೋಲನ್ನು ಹಿಡಿದುಒಮ್ಮೆ ನಮಸ್ಕರಿಸಿ ನಿಂತಲ್ಲಿಯೇಐದು ಸುತ್ತು ಪ್ರದಕ್ಷಿಣೆ ಹಾಕುತ್ತಾ ಎರಡು ಕೈ ಮುಂದೆಚಾಚಿ ಸಂಪೂರ್ಣವಾಗಿದೇಹವನ್ನು ನೆಲಕ್ಕೆತಾಗುವಂತೆ ಬಾಗಿ ನಮಸ್ಕರಿಸುತ್ತಾರೆ.ಇವರುಊರಿನ ಬ್ರಹ್ಮದೇವರುಅಂದರೆಗುಡ್ಡಿಕಲ್ಲಿನ [ಅಗಸೆ ಬಾಗಿಲು] ಮೂಲಕ ಊರದೇವರತನಕ ನಮಸ್ಕರಿಸುತ್ತಾ ಬರುತ್ತಾರೆ.ಬರುವಾಗ ಓಣಿಗಳಲ್ಲಿ ಎಲ್ಲಿಯಾದರೂ ಮೂಲೆಗಳು ಬಂದರೆಒಂದುನಿಂಬೆಹಣ್ಣನ್ನು ಕತ್ತರಿಸಿ ಕತ್ರಿಕ್ಯೆಯಿಂದ ಎಸೆಯುತ್ತಾರೆ. ಅಂದರೆ ಎಡಗೈ ಓಳನ್ನು ಬಲಗಡೆಗೆ, ಬಲಗೈ ಓಳನ್ನು ಎಡಗಡೆಗೆ ಎಸೆಯುತ್ತಾರೆ. ಅಥವಾ ತೆಂಗಿನಕಾಯಿಯನ್ನು ನೆಲಕ್ಕೆ ಜೋರಾಗಿ ಒಂದೇ ಸಾರಿಗೆ ಒಡೆಯುವಂತೆ ಎಸೆಯುತ್ತಾರೆ.

ಹೀಗೆ ದೀಡ್ ನಮಸ್ಕಾರ ಹಾಕುವವರು ಊರಿನ ಪ್ರಬಲ ಸಮುದಾಯದ, ಮಧ್ಯಮ ವರ್ಗದ ಕುಟುಂಬದವರಾಗಿರುತ್ತಾರೆ. ಹೀಗೆ ಇಡೀ ಊರ ಜನರು ಹಬ್ಬದಂತೆಯೇ ಹೊಸ ಬಟ್ಟೆ ಧರಿಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ದೀಡ್ ನಮಸ್ಕಾರ ಹಾಕುವುದು ಮುಗಿದ ನಂತರ ಊರ ದೈವದ ಜನರೆಲ್ಲರೂ ಸೇರಿ ಊರಿನ ಎಲ್ಲಾ ದೇವಾಲಯಗಳಿಗೆ ಹೋಗಿ ಎಣ್ಣೆ ದೀಪ ಹಚ್ಚಿ ಬರುತ್ತಾರೆ. ಇದಕ್ಕೆ ಎಣ್ಣೆ ಬೀರುವುದು ಎಂದು ಕರೆಯುತ್ತಾರೆ. ದೀಡ್ ನಮಸ್ಕಾರದ ಕಾರ್ಯವೆಲ್ಲಾ ಮುಗಿದ ಮೇಲೆ ಅವರಿಗೆಲ್ಲಾ ಹೊಸ ಬಟ್ಟೆ ತೊಡಿಸಿ ಊರಿನ ಸರ್ವರೂ ಸೇರಿ ಬ್ರಾಹ್ಮಣ ಅಥವಾ ಅಯ್ಯನವರನ್ನು ಕರೆಯಿಸಿ ದೇವರಿಗೆಅಭಿಷೇಕ ಮಾಡಿಸುತ್ತಾರೆ.

ಹಾಗೆಯೇ ಮಳೆಯಿಲ್ಲದೇ ಬರಗಾಲ ಬಿದ್ದ ಈ ಸಂದರ್ಭದಲ್ಲಿ "ಊರ ಗ್ರಾಮದೇವತೆಯ ಗುಡಿಯಲ್ಲಿ ಒಂಬತ್ತು, ಹನ್ನೊಂದು ಇಲ್ಲವೇ ಇಪ್ಪತ್ತೊಂದು ದಿನ ಹೀಗೆ ಜನರ ಅನುಕೂಲಕ್ಕೆ ತಕ್ಕಂತೆ ಭಜನೆ ಮಾಡುತ್ತಾರೆ." ಈ ಭಜನೆ ಹಾಡುಗಳಲ್ಲಿ ಎಲ್ಲಾದೇವರನ್ನು ಸ್ತುತಿಸಿ ಹಲವು ನೀತಿಗಳನ್ನು ಹೇಳಿ ಆ ದೇವರಲ್ಲಿ ಮಳೆಯ ಕುರಿತಾಗಿ ಹರಸುತ್ತಾರೆ.